NP – 024

# IV Semester B.C.A. Examination, August/September 2023
## (NEP)
## ಕನ್ನಡ ಪತ್ರಿಕೆ – 4
## ಗಣಕ ಕನ್ನಡ – 4

Time : 2½ Hours  Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (200 ಪದಗಳಿಗೆ ಮೀರದಂತೆ). (2×10=20)

1) 'ನಾಗಣ್ಣನ ಕನ್ನಡಕ' ಕವಿತೆಯ ಸ್ವಾರಸ್ಯವನ್ನು ವಿವರಿಸಿ.

2) ಆಧುನಿಕ ಜಗತ್ತಿನ ಬದುಕಿನ ಪಲ್ಲಟಗಳನ್ನು 'ಮಣ್ಣಿನ ಮುಚ್ಚಳ' ಕತೆ ಪ್ರಸ್ತುತಪಡಿಸಿರುವ ಬಗೆ ಹೇಗೆ ? ವಿವರಿಸಿ.

3) ನಮ್ಮ ಮಾತನ್ನು ಅಕ್ಷರವಾಗಿ ಪರಿವರ್ತಿಸುವ ತಂತ್ರಾಂಶಗಳನ್ನು ಪರಿಚಯಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (100 ಪದಗಳಿಗೆ ಮೀರದಂತೆ). (4×5=20)

1) ಕವಿನಪ್ಪನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2) ಕವಿತೆಯ ಆರಂಭದಲ್ಲಿ ರಾತ್ರಿಯನ್ನು ಹೇಗೆ ವರ್ಣಿಸಲಾಗಿದೆ ?

3) ಲಿಜ್ಜತ್ ಪಾಪಡ್ ಬೆಳೆದು ಬಂದ ದಾರಿಯನ್ನು ನಿರೂಪಿಸಿ.

4) ರಾಯರು ಸಂತೆಗೆ ಹೋದಾಗ ಆದ ಅನುಭವಗಳನ್ನು ಕುರಿತು ಬರೆಯಿರಿ.

5) ಆರಂಭಿಕ ವಿಜ್ಞಾನ ಸಾಹಿತ್ಯದ ಅನುವಾದಗಳ ಬಗ್ಗೆ ಬರೆಯಿರಿ.

III. ಕೆಳಕಂಡ ಕಂಡಿಕೆಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿ. (1×4=4)

ಕವಿನಪ್ಪ ನನಗೆ ಪರಿಚಿತನಿದ್ದ ವ್ಯಕ್ತಿಯೇ ಆಗಿದ್ದ. ಮುಖ್ಯ ರಸ್ತೆಯ ಪಕ್ಕದಲ್ಲಿ ಅವನ ಮನೆಯಿತ್ತು . ಮನೆ ಹಿಂದೆ ತೋಟ , ಪ್ರತಿದಿನ ಬೆಳಿಗ್ಗೆ ಸಂಜೆ ಅವನ ಮನೆ ಮುಂದೆ ನಾನು ಬೈಕಿನಲ್ಲಿ ಅಡ್ಡಾಡುತ್ತಿದ್ದೆ. ಕವಿನಪ್ಪ ಯಾವತ್ತೂ ಅವನಾಗಿ ಮಾತನಾಡಿಸಿದವನಲ್ಲ. ವಿಪರೀತ ಸಂಕೋಚದ ವ್ಯಕ್ತಿ . ಅದೂ ಅಲ್ಲದೆ ಯಾವಾಗಲೂ ಕುಡಿದಿರುತ್ತಿದ್ದ. ಮೊದಲಿಗೆ ಶ್ರೀಮಂತನಾಗಿದ್ದವ. ದಿನ ಕಳೆದಂತೆ ನಾನಾ ಕಾರಣಗಳಿಂದ ಅವನ ಸಿರಿತನ ಸವೆದುಹೋಗಿತ್ತು .

IV. ಪುಷ್ಪಾ ಎಂಬ ಕಾಲ್ಪನಿಕ ಹೆಸರಿನಲ್ಲಿ ಕಂಪನಿಯೊಂದರ ಲೆಕ್ಕಪರಿಶೋಧಕ ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ. (1×4=4)

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ (90 ಪದಗಳಿಗೆ ಮೀರದಂತೆ). (1×4=4)

ಅತಿವೃಷ್ಟಿಯಿಂದಾಗಿ ಬೆಳೆ ನಾಶವಾಗಿರುವುದನ್ನು ನೋಡುತ್ತಿರುವ ರೈತ.

P.T.O.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ, ಸೂಕ್ತ ಶೀರ್ಷಿಕೆ ನೀಡಿ. (1×4=4)

ರಾಯರು ಆ ಮುರಿದ ಚಾಳೀಸನ್ನು ಒಮ್ಮೆ ಮೂಗಿನ ಮೇಲೆ ಏರಿಸಿಕೊಂಡು ನೋಡಿದರು. ಏನಾಶ್ಚರ್ಯ ! ಭಗ್ನ ಇಡೀ ಬ್ರಹ್ಮಾಂಡದಲ್ಲಿ ಕೋಟಿ ಸೂರ್ಯರು ಬೆಳಗಿದ ಅನುಭವ ರಾಯರಿಗಾಯಿತು. ತಮ್ಮ ಹಳೆಯ ಯಾವ ಚಾಳೀಸಿನಲ್ಲೂ ಎಂದೂ ಇಷ್ಟೊಂದು ನಿಚ್ಚಳವಾಗಿ ಕಾಣಿಸಿರಲಿಲ್ಲ. ಕಣ್ಣೆದುರಿಗೆ ಚಾಳೀಸು ಹಿಡಿದು ಒಮ್ಮೆ ಜೋಗೇರವನ ಮುಖ ನೋಡಿದರು. ಮುಖವಷ್ಟೇ ಅಲ್ಲ, ಆ ಜೋಗೇರವನ ಅಂತರಂಗವೇ ಒಡಮೂಡಿ ಕಣ್ಣೆದುರಿಗೆ ಕಟ್ಟಿದಂತಾಯ್ತು . ರಾಯರಿಗೆ ಖುಷಿಯೋ ಖುಷಿ. ಚೌಕಾಸಿಯ ಸ್ವಭಾವದ ರಾಯರು ಮರು ಮಾತಾಡದೇ ಜೋಗೇರವನು ಹೇಳಿದ ಬೆಲೆ ಕೊಟ್ಟು ಚಾಳೀಸನ್ನು ಜೇಬಿಗೆ ಹಾಕಿಕೊಂಡು ಹೊರಟರು.

VII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ. (4×1=4)

(ಎಲ್ಲಾ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ)

1) ಲೇಖಕರ ವೃತ್ತಿ ಯಾವುದು ?

ಎ) ವೈದ್ಯ

ಬಿ) ಪಶುವೈದ್ಯ

ಸಿ) ದಂತ ವೈದ್ಯ

ಡಿ) ಪಶುಪಾಲಕ

2) ಮಿಂಚು-ಗುಡುಗುಗಳ ನಡುವೆ ಮರೆಯಾಗಿ ಹೋದವರು ಯಾರು ?

ಎ) ಬೋದಿಲೇರ್

ಬಿ) ಲಂಕೇಶ್

ಸಿ) ಡಿ. ಆರ್. ಎನ್.

ಡಿ) ಡಾಂಟೆ

3) ರಾಯರಿಗೆ ಮುರಿದ ಚಾಳೀಸನ್ನು ಮಾರಿದವರು ಯಾರು ?

ಎ) ಎಲ್ಲವ್ವ

ಬಿ) ರಂಗನಾಥ

ಸಿ) ಹರಿಣಾಬಾಯಿ

ಡಿ) ಜೋಗೇರವ

4) 'ಅಕೇಷಿಯಾ ಅರೇಬಿಕ' ಮರ ಯಾವುದು ?

ಎ) ಕರಿಜಾಲಿ ಮರ

ಬಿ) ನೀಲಗಿರಿ ಮರ

ಸಿ) ಮಾವಿನ ಮರ

ಡಿ) ಬಿದಿರು